CIVIC BANGALORE
CITIZENS VOLUNTARY INITIATIVE FOR THE CITY

ಸಹಯೋಗ **ಸ್ಪೇಡ್ ಸಂಸ್ಥೆ**

**"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಜಾದ್ ನಗರ ವಾರ್ಡನಿಂದ ನೂತನವಾಗಿ ಆಯ್ಕೆಯಾದ ವಾರ್ಡ ಸದಸ್ಯೆ ಶ್ರೀಮತಿ ಸುಜಾತ ಡಿ.ಸಿ ರಮೇಶ್ ರವರಿಗೆ ಬಂಡೆ ಸ್ಲಂ ಹಾಗೂ ಝುಂಡ ಸ್ಲಂನ ಅಭಿವೃದ್ಧಿ ಗೊಳಿಸಲು ಸಮುದಾಯದವರಿಂದ ಬೇಡಿಕೆ ಸಲ್ಲಿಕೆ ಹಾಗೂ ಮುಖಾಮುಖಿ ಚರ್ಚೆ ಕಾರ್ಯಕ್ರಮ ವರದಿ"**

**ದಿನಾಂಕ:–15–09–2015 ರ ಮಂಗಳವಾರ**
**ಸ್ಥಳ:– ಬಂಡೆ ಸ್ಲಂ, ಮೈಸೂರು ರಸ್ತೆ, ಆಜಾದ್‌ನಗರ ವಾರ್ಡ ಬೆಂಗಳೂರು–26**
**ಸಮಯ: ಬೆಳಗ್ಗೆ 10.15 ರಿಂದ 12.45 ರವರೆಗೆ.**
**ಭಾಗವಹಿಸಿದವರ ಸಂಖ್ಯೆ:250**

**ಭಾಗವಹಿಸಿದ ಮುಖ್ಯ ಅತಿಥಿಗಳು:**

1. **ಶ್ರೀಮತಿ ಸುಜಾತ ಡಿ.ಸಿ ರಮೇಶ್ – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು ಆಜಾದ್‌ನಗರ ವಾರ್ಡ, ವಾರ್ಡ ನಂ –141**
2. **ಶ್ರೀ ಪಿ.ಆರ್. ರಮೇಶ್ – ಅಧ್ಯಕ್ಷರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ**
3. **ಕಾರ್ಯಕ್ರಮದ ಅಧ್ಯಕ್ಷತೆ – ಶ್ರೀಮತಿ ಕಾತ್ಯಯಿನಿ ಚಾಮ್‌ರಾಜ್, ಕಾರ್ಯನಿರ್ವಾಹಕ ಟ್ರಸ್ಟಿ, ಸಿವಿಕ್ ಬೆಂಗಳೂರು ಸಂಸ್ಥೆ.**
4. **ಸ್ಲಂ ಮಂಡಳಿಯ ಅಧಿಕಾರಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳು.**

**ಕಾರ್ಯಕ್ರಮದ ಪ್ರಾರಂಭದಲ್ಲಿ ಆಜಾದ್ ನಗರ ವಾರ್ಡನ ಬಂಡೆ ಸ್ಲಂನ್ನು ಕೌನ್ಸಿಲರ್ ಶ್ರೀಮತಿ ಸುಜಾತ ಡಿ.ಸಿ ರಮೇಶ್ ರವರು ಸಮುದಾಯದವರೊಂದಿಗೆ ಪ್ರತಿ ಬೀದಿಗೂ ಹೋಗಿ ಜನರ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರಿಸುವುದಾಗಿ ತಿಳಿಸಿದರು**

**ಕಾರ್ಯಕ್ರಮದ ಸ್ವಾಗತ ಮತ್ತು ಉದ್ದೇಶ ಶ್ರೀ ವೀರೇಶ್ ಎ ಎಮ್ :–**

ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯ ಅತಿಥಿಗಳಿಗೆ ಸ್ವಾಗತವನ್ನು ಕೋರಿ ನಂತರ ಆಜಾದ್ ನಗರ ವಾರ್ಡನಲ್ಲಿ ಕಳೆದ ಒಂದು ವರ್ಷದಿಂದ ಪ್ರಸ್ತುತ ಕೌನ್ಸಿಲರ್ ರವರ ಪತಿಯವರ ಸಹಕಾರ ಹಾಗೂ ವಿವಿಧ ಸ್ಥಳೀಯ ನಾಯಕರ ಸಹಯೋಗದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಈ ವಾರ್ಡನಲ್ಲಿ ಮಾಡಿ ಪಿಂಚಣಿ, ರೇಷನ್ ಕಾರ್ಡ, ಕಟ್ಟಡ ನಿರ್ಮಾಣ ಕಾರ್ಮಿಕರ ಕಾರ್ಡ ಹಾಗೂ ಆರ್ ಎಸ್ ಬಿ ವೈ ಕಾರ್ಡ, ಭಾಗ್ಯಲಕ್ಷ್ಮೀ ಯೋಜನೆಗಳನ್ನು ಮಾಡಿಸಲಾಗಿದೆ.

ಸಮುದಾಯದವರೇ ಆಜಾದ್ ನಗರ ವಾರ್ಡ (ವಾರ್ಡ್ ನಂ 141 ರಲ್ಲಿ) ಬಂಡೆ ಸ್ಲಂ, ಝುಂಡ ಸ್ಲಂನ ಅಭಿವೃದ್ಧಿಗೊಳಿಸಲು ಸಮುದಾಯದವರು ಪಟ್ಟಿ ಮಾಡಿರುವ ಬೇಡಿಕೆಗಳನ್ನು **ಆಜಾದ್ ನಗರ ವಾರ್ಡಗೆ ನೂತನವಾಗಿ ಆಯ್ಕೆಯಾದ ವಾರ್ಡ ಸದಸ್ಯೆ ಶ್ರೀಮತಿ ಸುಜಾತ ಡಿ.ಸಿ ರಮೇಶ್ ಹಾಗೂ ಪಿ.ಅರ್ ರಮೇಶ್, ಅಧ್ಯಕ್ಷರು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ರವರಿಗೆ ಸಲ್ಲಿಸಿ ಈ ಬೇಡಿಕೆಗಳಿಗೆ ಅನುಗುಣವಾಗಿ ವಾರ್ಡಿಗೆ ಬರುವ ಅಯವ್ಯಯವನ್ನು ವಾರ್ಷಿಕವಾರು ರಚಿಸಿ** ಸಮುದಾಯದವರೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡು **ಪ್ರತಿ ತಿಂಗಳ 1ನೇ ಶನಿವಾರ** ಹಾಗೂ **ಪ್ರತಿ ತಿಂಗಳ 3ನೇ ಶನಿವಾರ ಜನಸ್ಪಂದನ ಸಭೆಗಳನ್ನು ವಾರ್ಡ ಮಟ್ಟದಲ್ಲಿ ಮಾಡಿ ಸಾರ್ವಜನಿಕರ** ಕುಂದು ಕೊರತೆಗಳ ಬಗ್ಗೆ ಗಮನಹರಿಸಿ ಅದಕ್ಕೆ ಪರಿಹಾರಗಳನ್ನು ಕಂಡು ಕೊಳ್ಳುವುದು ಹಾಗೂ **ಕೌನ್ಸಿಲರ್ ರವರ ಮುಖ್ಯ ಜವಾಬ್ದಾರಿಗಳನ್ನು ಸಮುದಾಯದವರಿಗೆ ತಿಳಿಸುವುದು. ಈ ಕಾರ್ಯಕ್ರಮದ ಉದೇಶವಾಗಿದೆ ಎಂದು ತಿಳಿಸಿದರು.**

**ಶ್ರೀ ವಿರೇಶ್ ರವರು ಸಮುದಾಯದವರ ಬೇಡಿಕೆಗಳನ್ನು ಮುಖ್ಯ ಅತಿಥಿಗಳಿಗೆ ತಿಳಿಸುವುದು.**

ಆಜಾದ್ ನಗರ ವಾರ್ಡ (ವಾರ್ಡ್ ನಂ 141 ರಲ್ಲಿ) ಬಂಡೆ ಸ್ಲಂ, ಝುಂಡ ಸ್ಲಂನ ಅಭಿವೃದ್ಧಿಗೊಳಿಸಲು ಸಮುದಾಯದವರು ಪಟ್ಟಿ ಮಾಡಿರುವ ಬೇಡಿಕೆಗಳನ್ನು **ಆಜಾದ್ ನಗರ ವಾರ್ಡಗೆ ನೂತನವಾಗಿ ಆಯ್ಕೆಯಾದ ವಾರ್ಡ ಸದಸ್ಯೆ ಶ್ರೀಮತಿ ಸುಜಾತ ಡಿ.ಸಿ ರಮೇಶ್ ಹಾಗೂ ಪಿ.ಅರ್ ರಮೇಶ್, ಅಧ್ಯಕ್ಷರು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯವರಿಗೆ ಈ ಕೆಳಕಂಡ ಅಂಶಗಳನ್ನು ತಿಳಿಸಿದರು**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದೇಶ ಅನುಸಾರ ಪ್ರತಿ ತಿಂಗಳ 1ನೇ ಶನಿವಾರ ಜನಸ್ಪಂದನ ಸಭೆಯನ್ನು ವಾರ್ಡ್‌ನ ಕೌನ್‌ಸಿಲರ್ ರವರು ಅಧ್ಯಕ್ಷತೆಯಲ್ಲಿ ವಾರ್ಡ ಮಟ್ಟದಲ್ಲಿ ಮಾಡುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಅಧಿಕಾರಕ್ಕೆ ಬಂದ 3 ತಿಂಗಳ ಒಳಗಾಗಿ ವಾರ್ಡ ಸಮಿತಿಯನ್ನು ಮಾಡುವುದು. ಹಾಗೂ ಈ ಸಮಿತಿಯಲ್ಲಿ ನಮ್ಮ ಸ್ಲಂ ನವರಿಗೆ ಆಧ್ಯತೆಯನ್ನು ನೀಡಿ
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಅಧಿಕಾರಕ್ಕೆ ಬಂದ ನಂತರ ಅಂಗನವಾಡಿ ಕೇಂದ್ರದಲ್ಲಿ ಬಾಲವಿಕಾಸ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು ಹಾಗೂ ತಿಂಗಳಿಗೆ ಒಂದು ಭಾರಿಯಾದರು ಸಭೆಯನ್ನು ಸೇರಿ ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಅಧಿಕಾರಕ್ಕೆ ಬಂದ ನಂತರ ಶಾಲಾ ಮಟ್ಟದ ಶಾಲಾ ಅಭಿವೃದ್ಧಿ ಉಸ್ತುವಾರಿ ಸಮಿತಿಯನ್ನು (ಎಸ್‌ಡಿಎಂಸಿ) ತಮ್ಮ ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು ಹಾಗೂ ತಿಂಗಳಿಗೆ ಒಂದು ಭಾರಿಯಾದರು ಸಭೆಯನ್ನು ಸೇರಿ ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಅಧಿಕಾರಕ್ಕೆ ಬಂದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರದ ರೋಗಿ ಕಲ್ಯಾಣ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು ಹಾಗೂ ಸಭೆಯನ್ನು ಸೇರಿ ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು.
- ವಾರ್ಡನ ಬೇರೆ ಕಡೆಯಿಂದ ಕಸ ತ್ಯಾಜ್ಯವನ್ನು ನಮ್ಮ ಸ್ಲಂನ ರಸ್ತೆಗೆ ಹಾಗೂ ಚರಂಡಿಗೆ ಸುರಿಯುತ್ತಿದ್ದಾರೆ ಅದನ್ನು ನಿಲ್ಲಿಸಿ.

- ನಮ್ಮ ಸ್ಲಂನಲ್ಲಿರುವ 300 ಮೀಟರ್ ರಾಜ್ ಕಾಲುವೆಯಲ್ಲಿ ತುಂಬಿರುವ ಹುಳನ್ನು ಎತ್ತಿ ಸ್ಲೇಬ್ ಆಳವಡಿಸಿ ಕೊಡಿ.
- ಬಂಡೆಯಿಂದ ಎತ್ತರ ವಿರುವ ಮೇಲಿನ ಮನೆಯವರು ಕೆಳಮನೆಗಳ ಮೇಲೆ ಕಸವನ್ನು ಹಾಕುತ್ತಾರೆ ದಯವಿಟ್ಟು ಹೀಗೆ ಮಾಡದಂತೆ ಅವರಿಗೆ ತಿಳಿಸಿ.
- ಪ್ರತಿ ಮನೆಗೆ ಹಸಿ ಕಸ ಹಾಗೂ ಒಣ ಕಸ ಹಾಕಲು ಡಬ್ಬಗಳನ್ನು ನೀಡಿ ಹಾಗೂ ಬಿನ್‌ಗಳನ್ನು ಇಟ್ಟು ಕಸ ವಿಲೇವಾರಿಯನ್ನು ಮಾಡಿ.
- ಕಸ ವಿಲೇವಾರಿಯನ್ನು ಪ್ರತಿದಿನ ಮಾಡಿ.
- ಸ್ಲಂ ನಲ್ಲಿ ಸೊಳ್ಳೆ ಹೆಚ್ಚಾಗಿವೆ, ವಾರಕ್ಕೆ ಒಮ್ಮೆಯಾದರು ಸ್ಲಂನ ಎಲ್ಲಾ ಮೂಲೆಗಳಿಗೂ ಸೊಳ್ಳೆ ಮದ್ದು ಸಿಂಪಡಿಸಿ.
- ನಾಯಿ ಕಾಟ ಜಾಸ್ತಿಯಾಗಿದೆ ಅವುಗಳಿಂದ ಮುಕ್ತಿಗೊಳಿಸಿ.
- ನಮ್ಮ ವಾರ್ಡನಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಪ್ರತಿ ತಿಂಗಳು ಮಾಡಿ.
- ಸಮುದಾಯ ಶೌಚಾಲಯಗಳನ್ನು ಸ್ಲಂನ 4 ಭಾಗಗಳಲ್ಲಿ ಕಟ್ಟಿಸಿ ಕೊಡಿ.
- "ಮನೆ ಹಕ್ಕು ಪತ್ರಗಳನ್ನು ನೀಡಿ" ನಮಗೆ ಇಲ್ಲಿಯೆ ಸ್ಥಿರವಾಗಿ ನೆಲೆಸಲು ಸಹಾಯಮಾಡಿ.

- ನಮ್ಮ ಸ್ಲಂನಲ್ಲಿರುವವರಿಗೆ ಸುರ್ಸಜಿತ ವಸತಿಗಳನ್ನು ನಿರ್ಮಾಣ ಮಾಡಿಕೊಡಿ.
- ಸ್ಲಂನಲ್ಲಿರುವ ನಾವೆಲ್ಲ ಬಡವರು ಒಂದಿಲ್ಲದ ಒಂದು ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ ದಯವಿಟ್ಟು "ಎಲ್ಲಾರಿಗೂ ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಿ" ನಮ್ಮ ಆಹಾರದ ಹಕ್ಕನ್ನು ನಮಗೆ ನೀಡಿ.
- ವಯಸ್ಸಾದ, ವಿಕಾಲಾಂಗ ಹಾಗೂ ವಿಧವೆಯವರು ನಮ್ಮ ಸ್ಲಂ ನಲ್ಲಿ ಇದ್ದರೆ ಪಿಂಚಣಿ ಮಾಡಿಸಿ ಸಾಮಾಜಿಕ ಭದ್ರತೆಯನ್ನು ನೀಡಿ.
- ಚುನಾವಾಣೆ ಗುರ್ತಿನ ಚೀಟಿಗಳನ್ನು ನೀಡಿ.
- ಆಧಾರ್ ಕಾರ್ಡಗಳನ್ನು ನೀಡಿ ನಮ್ಮ ಸ್ಲಂ ನಲ್ಲಿ 70% ಜನರಿಗೆ ಆಧಾರ್ ಕಾರ್ಡ ಇಲ್ಲ ಹಾಗೂ ಹೊರಗಡೆ ಈ ಕಾರ್ಡ ಮಾಡಿಸಿ ಕೊಳ್ಳಲು ಒಬ್ಬರಿಗೆ 150 ರೂ ನೀಡಬೇಕಾಗಿದೆ ಆದ್ದರಿಂದ ನಮ್ಮ ಸ್ಲಂ ನಲ್ಲಿಯೇ ಉಚಿತ ಆಧಾರ್ ಶಿಬಿರ ಮಾಡಿ ಆಧಾರ್ ಕಾರ್ಡಗಳನ್ನು ನೀಡಿ.
- ಸೀಮೆಎಣ್ಣೆಯನ್ನು ಕೊಡುವುದನ್ನು ನಿಲ್ಲಿಸಿದೆ ಆದರೆ ನಮಗೆ ಗ್ಯಾಸ್ ಇಲ್ಲ ಗ್ಯಾಸ್ ತೆಗೆದು ಕೊಳ್ಳಲು ರೂ 2600ರೂ ಆಗುತ್ತದೆ ನಮ್ಮ ಹತ್ತಿರ ಅಷ್ಟು ಹಣವಿಲ್ಲ ಆದ್ದರಿಂದ ಆಹಾರ ಇಲಾಖೆಯು ಗ್ಯಾಸ್ ಕನೆಕ್ಷನ್ ಅನ್ನು ರೂ 1600ಗೆ ನೀಡುತ್ತಿದೆ ನಮಗೆ ಗ್ಯಾಸ್ ಕನೆಕ್ಷನ್ ಅನ್ನು ಸಬ್ಸಡಿಯಲ್ಲಿ ಕೊಡಿಸಿ.
- ನಮ್ಮ ವಾರ್ಡನಲ್ಲಿ ಬೆಂಗಳೂರು ಒನ್ ಕೇಂದ್ರ ಸ್ಥಾಪನೆ ಮಾಡಿ.(ಕರೆಂಟ್ ಬೀಲ್, ವಾಟರ್ ಬಿಲ್ ಪಾವತಿಸಲು, ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು, ಈ ಆಧಾರ್ ಪಡೆಯಲು, ಚುನಾವಾಣೆ ಗುರುತಿನ ಚೀಟಿಯನ್ನು ಪಡೆಯಲು ಬೆಂಗಳೂರು ಒನ್ ಅವಶ್ಯಕವಾಗಿ ಬೇಕಾಗಿದೆ.)
- ಸ್ಲಂ ನಲ್ಲಿ ಇನ್ನು ತುಂಬ ಜನರಿಗೆ ಬ್ಯಾಂಕ್ ಆಕೌಂಟ್ ಇಲ್ಲ ಆದ್ದರಿಂದ ನಮಗೆ ಜನಧನ್ ಬ್ಯಾಂಕ್ ಆಕೌಂಟ್ ಹಾಗೂ ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ, *ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ* ಮಾಡಿಸಿ ಕೊಡಿ.
- 72 ಬಗೆಯ ಅಂಸಘಟಿತ ಕಾರ್ಮಿಕರಿಗೆ ಇರುವ ಆಮ್ ಆದ್ಮಿ ಬೀಮಾ ಯೋಜನೆಯನ್ನು ನಮಗೆ ಮಾಡಿಸಿ ಕೊಡಿ.
- ನಮ್ಮ ಮಕ್ಕಳಿಗೆ ವಿದ್ಯಾರ್ಥಿವೇತನಗಳನ್ನು ಕೊಡಿಸಿ ಕೊಡಿ.
- ಟೈಲರಿಂಗ್ ಹಾಗೂ ಬ್ಯೂಟಿಸಿಯನ್ ತರಬೇತಿಗಳನ್ನು ನಮ್ಮ ಸ್ಲಂ ಜನರಿಗೆ ನೀಡಿ ಸ್ವ ಉದ್ಯೋಗಿಗಳಾಗಿ ಮಾಡಿ.
- ಸರ್ಕಾರಿ ಯೋಜನೆಗಳ ಬಗ್ಗೆ ನಮಗೆ ಮಾಹಿತಿ ನೀಡಿ ಅದರಲ್ಲಿನ ಸೌಲಭ್ಯಗಳನ್ನು ನಮಗೆ ಮಾಡಿಸಿ ಕೊಡಿ.
- ಸ್ಲಂನಲ್ಲಿ ಜೋರಾಗಿ ಮಳೆ ಬಂದರೆ ಮಳೆ ನೀರು ಮನೆ ಒಳಗೆ ನುಗ್ಗಿ ಬರುತ್ತದೆ ಚರಂಡಿ ವ್ಯವಸ್ಥೆ ಮಾಡಿ
- ಬಂಡೆ ಮೇಲೆ ಒಳಚರಂಡಿ ತುಂಬಿ ಹೊರಬರುತ್ತಿದೆ. ಖಾಲಿ ಮಾಡಿ ಕೊಡಿ
- ಅತಿಮುಖ್ಯವಾಗಿ ಎಲ್ಲಾ ಮನೆಗೂ ಕೊಳಾಯಿ ನಲ್ಲಿ ಕನೆಕ್ಷನ್ ನೀಡಿ ಮೀಟರ್ ಆಳವಡಿಸಿ ಪ್ರತಿ ದಿನ ಬೆಳಗ್ಗೆ ಅಥವಾ ಸಂಜೆ ವೇಳೆ ನೀರು ಬರುವಂತೆ ವ್ಯವಸ್ಥೆ ಮಾಡಿ ಮತ್ತು ವಾಟರ್ ಟ್ಯಾಂಕ್‌ನ್ನು ಕಟ್ಟಿ 24ಗಂಟೆಯು ನೀರು ಸಿಗುವಂತೆ ಮಾಡಿ.
- ನೀರು ಮತ್ತು ಒಳ ಚರಂಡಿ ಪೈಪುಗಳು ಒಟ್ಟಾಗಿ ಇದ್ದು ಚಂರಡಿ ಪೈಪು ಹೊಡೆದು ಹೋಗಿರುವುದರಿಂದ ಕುಡಿಯುವ ನೀರಿನ ಜೊತೆ ಚರಂಡಿ ನೀರು ಬರುತ್ತಿದೆ ಇದನ್ನು ತಡೆಯಿರಿ.
- ಒಳಚರಂಡಿ ನೀರು ಹೊರಬರುತ್ತಿದೆ ಅದನ್ನು ಸ್ವಚ್ಚಗೊಳಿಸಿ ಕ್ರಮ ಕೈಗೊಳ್ಳಿ.
- ಸ್ಲಂ ನ ಎಲ್ಲಾ ಮನೆಗೂ ಚೇಂಬರ್ ಕನ್‌ಕ್ಷನ್ ನೀಡಿ.
- ನಮ್ಮ ಸ್ಲಂನಲ್ಲಿಯೇ ದಯವಿಟ್ಟು ಅಂಗನವಾಡಿ ಮಾಡಿಕೊಡಿ.
- ನಮ್ಮ ವಾರ್ಡನಲ್ಲಿ 4 ಅಂಗನವಾಡಿಗಳು ಸಮುದಾಯ ಭವನ ಹಾಗೂ ದೇವಸ್ಥಾನ ಜಾಗದಲ್ಲಿ ನೆಡೆಯುತ್ತಿದೆ ದಯವಿಟ್ಟು ಸ್ಥಳಾವಕಾಶ ಮಾಡಿಕೊಡಿ.

- ಅಂಗನವಾಡಿಗಳಿಗೆ ಬಾಡಿಗೆ ಕಟ್ಟಡ ಹಾಗೂ ಬಿಬಿಎಂಪಿ ಅನುಧಾನದಲ್ಲಿ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಿಕೊಡಿ.
- ನಮ್ಮ ವಾರ್ಡನಲ್ಲಿ ಎಲ್ಲಿಯು ಗ್ರಂಥಾಲಯವಿಲ್ಲ ಗ್ರಂಥಾಲಯ ಮಾಡಿ.
- ನಮ್ಮ ಸ್ಲಂನಲ್ಲಿನ ಎಲ್ಲಾ ರಸ್ತೆ/ಸಂಧಿಗಳಿವೆ ಇವೆಲ್ಲಾದಕ್ಕೂ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಮಾಡಿ ಕೊಡಿ.
- ನಮ್ಮ ಸ್ಲಂನಲ್ಲಿರುವ ಹಲವು ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ, ಸಂಪರ್ಕವನ್ನು ನೀಡಿ.
- ಸ್ಲಂ ನಲ್ಲಿರುವ ಎಲ್ಲಾ ಕರೆಂಟ್ ಕಂಬಗಳಿಗೆ ಬೀದಿ ದೀಪ ಅಳವಡಿಸಿ.
- ನಮ್ಮ ಸ್ಲಂನ ಸುತ್ತಮುತ್ತ ಒಟ್ಟು 6 ಅಂಗನವಾಡಿಗಳಿಗೆ ಕರೆಂಟ್ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಹಾಗೂ ಕುಡಿಯವ ನೀರಿನ ವ್ಯವಸ್ಥೆ ಮಾಡಿಕೊಡಿ.
- ಕುಂದು ಕೊರತೆ ಅಹವಾಲು ಕಾರ್ಯಕ್ರಮಗಳನ್ನು ಮಾಡಿ ನಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಿ ಎಂಬ ಅಂಶಗಳನ್ನು ಸಭೆಯಲ್ಲಿ ತಿಳಿಸಿದರು. ಹಾಗೂ **ಆಜಾದ್ ನಗರ ವಾರ್ಡಗೆ ನೂತನವಾಗಿ ಆಯ್ಕೆಯಾದ ವಾರ್ಡ ಸದಸ್ಯೆ ಶ್ರೀಮತಿ ಸುಜಾತ ಡಿ.ಸಿ ರಮೇಶ್ ಹಾಗೂ ಪಿ.ಅರ್ ರಮೇಶ್ ರವರಿಗೆ ಹಾಗೂ ಪಿ.ಅರ್ ರಮೇಶ್, ಅಧ್ಯಕ್ಷರು ಕರ್ನಾಟಕ ಕೊಳಚೆ ಅಭಿವೃದ್ದಿ ಮಂಡಳಿ ರವರಿಗೆ ಸಲ್ಲಿಸಿ ಈ ಮೇಲ್ಕಂಡ ಬೇಡಿಕೆಗಳನ್ನು ಸಮುದಾಯದವರು ನೀಡಿ ಮುಂದಿನಾ 5ವರ್ಷಗಳು ಈ ಅಂಶಗಳ ಮೇಲೆ ಕಾರ್ಯನಿರ್ವಹಿಸಿ ನಮ್ಮ ಸ್ಲಂನ್ನು ಅಭಿವೃಧ್ಧಿಗೋಳಿಸಿ ಎಂದು ತಿಳಿಸಿದರು.**

**ಮುಖ್ಯ ಅತಿಥಿಗಳ ಭಾಷಣ**

**ಶ್ರೀಮತಿ ಸುಜಾತ ಡಿ.ಸಿ ರಮೇಶ್** :- ಬಂಡೆ ಸ್ಲಂ ಹಾಗೂ ಝಂಡ ಸ್ಲಂ ನ ಬೇಡಿಕೆಗಳನ್ನು ಸ್ವೀಕರಿಸಿ ಹಾಗೂ ಅಹವಾಲುಗಳನ್ನು ಆಲಿಸಿ ಈ ಮೇಲ್ಕಂಡ ಬೇಡಿಕೆಗಳಿಗೆ ಕ್ರೀಯಾ ಯೋಜನೆಗಳನ್ನು ತಯಾರಿಸಿ ಹಂತ ಹಂತವಾಗಿ ಅಭಿವೃದ್ಧಿಗೋಳಿಸುತ್ತೆವೆ ಹಾಗೂ ಪ್ರತಿ ತಿಂಗಳ ಭಾನುವಾರ ಜನಸ್ಪಂಧನ ಸಭೆಗಳನ್ನು ಮಾಡಿ ಜನರ ಸಮಸ್ಯೆಗಳಾದ ನ್ಯಾಯಬೆ ಅಂಗಡಿ, ಸಾರ್ವಜನಿಕ ಆಸ್ಪತ್ರೆ, ಶಾಲೆ, ಕಸ ವಿಲೇವಾರಿಗೆ, ಭಾಗ್ಯಲಕ್ಷ್ಮೀ ಯೋಜನೆ, ಅಂಗನವಾಡಿ ಕೇಂದ್ರಗಳ ಬಗ್ಗೆ ಹಾಗೂ ನೀರು, ಒಳಚರಂಡಿ, ರಸ್ತೆ, ಬೀದಿ ದೀಪ, ಇವೆಲ್ಲಾದರೂಗಳಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೋಳ್ಳುವುದರ ಬಗ್ಗೆ ಕಾರ್ಯನಿರ್ವಹಿಸುತ್ತೇನೆ ಎಂದು ತಿಳಿಸಿದರು.

**ಶ್ರೀ ಪಿ.ಆರ್. ರಮೇಶ್:-** ಬಂಡೆ ಸ್ಲಂ ಜಾಗವು ಸರ್ಕಾರಿ ಸ್ಥಳವಾಗಿದ್ದು ಇಲ್ಲಿ ಯಾರಿಗೂ ಸ್ವಂತದ್ದು ಅಲ್ಲ ಹಾಗೂ ನೀವು 50 ವರ್ಷದಿಂದ ಇಲ್ಲಯೇ ವಾಸ ಮಾಡುತ್ತೀದ್ದಿರಿ ಆದ್ದರಿಂದ ನೀವು ಎಲ್ಲಾ ಒಪ್ಪಿದರೆ ನಿಮಗೆ ಸ್ಲಂ ಮಂಡಳಿಯಿಂದ ಅಧಿಸೂಚನೆ ಹೊರಡಿಸಿ ಕ್ರಯಾ ಪತ್ರ ನೀಡುತ್ತೇವೆ ಆಗ ನಿಮ್ಮ ಜಾಗ ನಿಮ್ಮ ಹೆಸರಿಗೆ ಆಗುತ್ತದೆ ಎಂದು ತಿಳಿಸಿದರು.

**ಶ್ರೀಮತಿ ಕಾತ್ಯಯಿನಿ ಚಾಮ್‌ರಾಜ್- ಅಧ್ಯಕ್ಷೀಯ ಭಾಷಣದಲ್ಲಿ ಬಿಬಿಎಂಪಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಪ್ರತಿ ತಿಂಗಳ ಮೋದಲ ಶನಿವಾರ ಹಾಗೂ ಮೂರನೇ ಶನಿವಾರ ಜನಸ್ಪಂಧನ ಸಭೆಗಳನ್ನು ಕೌನ್ಸಿಲರ್‌ರವರ ಅಧ್ಯಕ್ಷತೆಯಲ್ಲಿ ಮಾಡಬೇಕು, ಕೌನ್ಸಿಲರ್‌ರವರು ಅಧಿಕಾರಕ್ಕೆ ಬಂದ 3ತಿಂಗಳ ಒಳಗಾಗಿ ವಾರ್ಡ ಸಮಿತಿಯನ್ನು ಮಾಡುವುದು. ಹಾಗೂ ಈ ಸಮಿತಿಯಲ್ಲಿ ನಮ್ಮ ಸ್ಲಂ ನವರಿಗೆ ಆಧ್ಯತೆಯನ್ನು ನೀಡುವುದರ ಬಗ್ಗೆ, ಅಂಗನವಾಡಿ ಕೇಂದ್ರದಲ್ಲಿ ಬಾಲವಿಕಾಸ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು ಹಾಗೂ ತಿಂಗಳಿಗೆ ಒಂದು ಭಾರಿಯಾದರು ಸಭೆಯನ್ನು ಸೇರಿ ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು, ಶಾಲಾ ಮಟ್ಟದ ಶಾಲಾ ಅಭಿವೃದ್ದಿ ಉಸ್ತುವಾರಿ ಸಮಿತಿಯನ್ನು (ಎಸ್‌ಡಿಎಂಸಿ) ತಮ್ಮ**

**ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು ಹಾಗೂ ತಿಂಗಳಿಗೆ ಒಂದು ಭಾರಿಯಾದರು ಸಭೆಯನ್ನು ಸೇರಿ ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು. ಪ್ರಾಥಮಿಕ ಆರೋಗ್ಯ ಕೇಂದ್ರದ ರೋಗಿ ಕಲ್ಯಾಣ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಪುನರ್ ರಚನೆ ಮಾಡುವುದು, ಒಣಕಸ ಹಸಿಕಸ ಎಂದು ವಿಂಗಡಣೆ ಮಾಡಲು ಅವರಿಗೆ ಡಬ್ಬಗಳನ್ನು ಬಿಬಿಎಂಪಿ ವತಿಯಿಂದ ನೀಡುವುದು, ಚರಂಡಿ ಸ್ವಚ್ಚತೆ ಮಾಡುವುದು, ಕಂಡಕಂಡಲ್ಲಿ ಕಸ ಹಾಕುವುದನ್ನು ನಿಲ್ಲಿಸಬೇಕು ಎಂಬುದನೆಲ್ಲವನ್ನು ತಿಳಿಸಿದರು.**

**ವಂದನಾರ್ಪಣೆ:–**

**ಸ್ಪೈಡ್ ಸಂಸ್ಥೆಯ ಶ್ರೀಮತಿ ವೀಣಾರವರು ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯ ಅತಿಥಿಗಳಿಗೆ ಹಾಗೂ ಸಮುದಾಯದವರಿಗೆ ಧನ್ಯವಾದಗಳನ್ನು ತಿಳಿಸಿದರು.**

**ಕಾರ್ಯಕ್ರಮದ ಛಾಯಚಿತ್ರಗಳು**







ಕಾರ್ಯಕ್ರಮದ ವರದಿ ತಯಾರಿಕರು
ಶ್ರೀ ಎ ಎಮ್ ವೀರೇಶ್